# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:19-10-2022ರಂದು ಬುಧವಾರ ಪೂರ್ವಾಹ್ನ 11-00 ಘಂಟೆಗೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಪ್ರಸನ್ನಕುಮಾರ ಬ್ಲಾಕ್, ಬೆಂಗಳೂರು ನಗರ ವಿಶ್ವವಿದ್ಯಾಲಯ ಆವರಣ, ವೈ. ರಾಮಚಂದ್ರ ರಸ್ತೆ, ಗಾಂಧಿನಗರ, ಬೆಂಗಳೂರು - ಈ ಸಭಾಂಗಣದಲ್ಲಿ ನಡೆದ 2022-23ರ ಹಣಕಾಸು ವರ್ಷದ ದ್ವಿತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳು.

| ಹಾಜರಾದ ಸದಸ್ಯರು: | | ಪದನಾಮ |
|---|---|---|
| 1. | **ಪ್ರೊ. ಬಿ.ಪಿ. ವೀರಭದ್ರಪ್ಪ**<br>ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | **ಶ್ರೀಮತಿ ಉಮಾ. ಕೆ**<br>ಉಪ ಕಾರ್ಯದರ್ಶಿಗಳು<br>ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ,<br>ವಿಧಾನಸೌಧ, ಬೆಂಗಳೂರು | ಸದಸ್ಯರು |
| 3. | **ಶ್ರೀ ಎಂ.ಜಿ. ವೆಂಕಟೇಶಯ್ಯ**<br>ಉಪಕಾರ್ಯದರ್ಶಿಗಳು (ಉನ್ನತ ಶಿಕ್ಷಣ)<br>ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 4. | **ಶ್ರೀ ಗುರುರಾಜ್ ರಾವ್**<br>ಹಿರಿಯ ನಿರ್ದೇಶಕರು ಹಾಗೂ<br>ಪದನಿಮಿತ್ತ ಜಂಟಿ ಕಾರ್ಯದರ್ಶಿ<br>ಯೋಜನಾ ಇಲಾಖೆ<br>ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 5. | **ಶ್ರೀ ಕುಮಾರೇಗೌಡ**<br>ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು | ಸದಸ್ಯರು |
| 6. | **ಪ್ರೊ. ಎಸ್.ಕೆ. ನವೀನ್‌ಕುಮಾರ್**<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 7. | **ಶ್ರೀ ಎಸ್. ರಾಮಕೃಷ್ಣ,** ಕೆ.ಎಸ್.ಎ.ಎಸ್.<br>ಹಣಕಾಸು ಅಧಿಕಾರಿ | ಸದಸ್ಯ ಕಾರ್ಯದರ್ಶಿಗಳು |

ಗೈರುಹಾಜರಾದ ಸದಸ್ಯರು

| | | |
|---|---|---|
| 1. | **ಶ್ರೀ ಜಿ. ಧರ್ಮಪ್ರಸಾದ್**<br>ಸಿಂಡಿಕೇಟ್ ಸದಸ್ಯರು | ಸದಸ್ಯರು |
| 2. | **ಶ್ರೀಮತಿ ಅನುರಾಧ. ಜಿ.** ಕೆ.ಎ.ಎಸ್. (ಹಿರಿಯ ಶ್ರೇಣಿ)<br>ಕುಲಸಚಿವರು<br>ಕುವೆಂಪು ವಿಶ್ವವಿದ್ಯಾಲಯ | ಸದಸ್ಯರು. |

ಪ್ರಸ್ತಾವನೆ:

ಪ್ರಾರಂಭದಲ್ಲಿ, ಹಣಕಾಸು ಅಧಿಕಾರಿಗಳು ಹಣಕಾಸು ವರ್ಷದ ದ್ವಿತೀಯ ಹಣಕಾಸು ಸಮಿತಿ ಸಭೆಗೆ ಆಗಮಿಸಿದ ಅಧ್ಯಕ್ಷರು ಹಾಗೂ ಸದಸ್ಯರುಗಳಿಗೆ ಆತ್ಮೀಯವಾಗಿ ಸ್ವಾಗತ ಕೋರಿದರು. ನಂತರ ಸಭೆಯ ಅಧ್ಯಕ್ಷರ ಅನುಮತಿಯನ್ನು ಪಡೆದು ಸಭಾ ಕಾರ್ಯಸೂಚಿಯಂತೆ ಕಾರ್ಯಕಲಾಪಗಳನ್ನು ಕೈಗೆತ್ತಿಕೊಳ್ಳಲಾಯಿತು.

| | |
|---|---|
| 2022-ಹಸ:1:01: | ದಿನಾಂಕ:21-07-2022 ಹಾಗೂ ದಿನಾಂಕ: 28-09-2022ರಂದು ನಡೆದ 2022-23ನೇ ಹಣಕಾಸು ವರ್ಷದ ಪ್ರಥಮ ಹಾಗೂ ವಿಶೇಷ ಹಣಕಾಸು ಸಮಿತಿ ಸಭೆಯ ನಡಾವಳಿಗಳ ದೃಢೀಕರಣ. |
| ನಿರ್ಣಯ: | ದಿನಾಂಕ:21-07-2022 ಹಾಗೂ 28-09-2022ರಂದು ನಡೆದ ಕುವೆಂಪು ವಿಶ್ವವಿದ್ಯಾಲಯದ 2022-23ನೇ ಸಾಲಿನ ಹಣಕಾಸು ವರ್ಷದ ಪ್ರಥಮ ಹಾಗೂ ವಿಶೇಷ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ದೃಢೀಕರಿಸಿತು. |
| 2022-ಹಸ:1:02: | ದಿನಾಂಕ: 21-07-2022 ಹಾಗೂ ದಿನಾಂಕ: 28-09-2022ರಂದು ನಡೆದ 2022-23ನೇ ಹಣಕಾಸು ವರ್ಷದ ಪ್ರಥಮ ಹಾಗೂ ವಿಶೇಷ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ. |
| ನಿರ್ಣಯ: | ದಿನಾಂಕ:21-07-2022 ಹಾಗೂ 28-09-2022ರಂದು ನಡೆದ 2022-23ನೇ ಕುವೆಂಪು ವಿಶ್ವವಿದ್ಯಾಲಯದ 2022-23ನೇ ಸಾಲಿನ ಹಣಕಾಸು ವರ್ಷದ ಪ್ರಥಮ ಹಾಗೂ ವಿಶೇಷ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ಅನು ಪಾಲನಾ ವರದಿಯನ್ನು ಸಭೆಯು ಪರಿಶೀಲಿಸಿ ಅನುಮೋದಿಸಿತು. |
| 2022-ಹಸ:1:03: | 2021-22ನೇ ಆರ್ಥಿಕ ವರ್ಷದ ಏಪ್ರಿಲ್-2021 ರಿಂದ ಮಾರ್ಚ್-2022ರವರೆಗಿನ ಸ್ವೀಕೃತಿ ಮತ್ತು ವೆಚ್ಚಗಳ ಅವಲೋಕನ ಹಾಗೂ ಅನುಮೋದನೆ ಕುರಿತು. |
| ಚರ್ಚೆ: | 2021-22ನೇ ಆರ್ಥಿಕ ವರ್ಷದ ಏಪ್ರಿಲ್-2021 ರಿಂದ ಮಾರ್ಚ್-2022ರವರೆಗಿನ ಸ್ವೀಕೃತಿ ಮತ್ತು ವೆಚ್ಚಗಳಿಗೆ ಅನುಮೋದನೆಯನ್ನು ನೀಡಲು ಹಣಕಾಸು ಅಧಿಕಾರಿಗಳು ಸಭೆಯಲ್ಲಿ ಕೋರಿದರು.<br>ಸಭೆಯು ಪರಿಶೀಲಿಸಿ, ಶೈಕ್ಷಣಿಕ ಹಾಗೂ ವಿದ್ಯಾರ್ಥಿಗಳ ಬೆಂಬಲ ಸೇವೆಗಳ ವೆಚ್ಚಗಳನ್ನು ಪೂರ್ಣ ಪ್ರಮಾಣದಲ್ಲಿ ವೆಚ್ಚ ಮಾಡದಿರುವ ಬಗ್ಗೆ ಸರ್ಕಾರದ ಪ್ರತಿನಿಧಿಗಳು ಆಕ್ಷೇಪಣೆ ವ್ಯಕ್ತಪಡಿಸಿದರು. ವಿಶ್ವವಿದ್ಯಾಲಯವು ಶೈಕ್ಷಣಿಕ, ಸಂಶೋಧನೆ ಮತ್ತು ವಿದ್ಯಾರ್ಥಿಗಳ ಕ್ಷೇಮಪಾಲನೆಗೆ ಹಾಗೂ ವಿದ್ಯಾರ್ಥಿಗಳ ಅಭಿವೃದ್ಧಿ ಮತ್ತು ಕ್ರೀಡಾ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡುವಂತೆ ಸಲಹೆ ನೀಡಿತು. ಆಡಳಿತಾತ್ಮಕ ವೆಚ್ಚಗಳನ್ನು ಕಡಿತಗೊಳಿಸುವಂತೆ ಸಭೆಯು ಹಣಕಾಸು ಅಧಿಕಾರಿಗಳಿಗೆ ಸೂಚಿಸಿತು. ಮಾನ್ಯ ಕುಲಪತಿಗಳು ಅತಿಥಿ ಉಪನ್ಯಾಸಕರ ಮತ್ತು ಭದ್ರತಾ ಸಿಬ್ಬಂದಿ / ಸರ್ವಿಸ್ ಎಜೆನ್ಸಿಯವರ ವೇತನಗಳಿಗೆ ಅನುದಾನವನ್ನು ನೀಡುವಂತೆ ಸರ್ಕಾರವನ್ನು ಕೋರಿದರು. ಸರ್ಕಾರದ ಉಪಕಾರ್ಯದರ್ಶಿಗಳು , ಆರ್ಥಿಕ ಇಲಾಖೆ - ಇವರು ಈ ಬಗ್ಗೆ ಸರ್ಕಾರದ ಪೂರ್ವಾನುಮತಿ ಪಡೆಯದೇ |

ನೇಮಕ ಮಾಡಿಕೊಂಡಿರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿ, ಮಂಜೂರಾದ ಹುದ್ದೆಗಳಿಗಿಂತ ಹೆಚ್ಚುವರಿಯಾಗಿ ನೇಮಕ ಮಾಡಿಕೊಂಡಿರುವ ಹುದ್ದೆಗಳಿಗೆ ಅನುದಾನವನ್ನು ನೀಡಲು ನಿರ್ದಿಷ್ಟ ಮಾರ್ಗಸೂಚಿಗಳಿಲ್ಲದ ಕಾರಣ ಅನುದಾನವನ್ನು ನೀಡಲು ಅವಕಾಶವಿರುವುದಿಲ್ಲವೆಂಬ ಅಂಶವನ್ನು ಸಭೆಗೆ ಸ್ಪಷ್ಟಪಡಿಸಿದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ, 2021-22ನೇ ಆರ್ಥಿಕ ವರ್ಷದ ಏಪ್ರಿಲ್-2021 ರಿಂದ ಮಾರ್ಚ್-2022ರವರೆಗಿನ ಸ್ವೀಕೃತಿ ಮತ್ತು ವೆಚ್ಚಗಳನ್ನು ' ಅನುಮೋದಿಸಲಾಯಿತು.

**2022-ಹಸ:1:04:** ~~2021-22ನೇ ಆರ್ಥಿಕ ವರ್ಷದ~~ ವಾರ್ಷಿಕ ಲೆಕ್ಕಪತ್ರಗಳ ಅವಲೋಕನ ಹಾಗೂ ಅನುಮೋದನೆ ಕುರಿತು.

**ಚರ್ಚೆ :** 2021-22ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಪತ್ರಗಳನ್ನು ಅನುಮೋದನೆ ನೀಡುವಂತೆ ಹಣಕಾಸು ಅಧಿಕಾರಿಗಳು ಸಭೆಯನ್ನು ಕೋರಿದರು.

ಸಭೆಯು ಪರಿಶೀಲಿಸಿದ ನಂತರ ಘನ ಸರ್ಕಾರದ K2 ಖಜಾನೆಯ ಮೂಲಕ ವೇತನ ಪಾವತಿಗೆ ರೂ. 1528.36ಲಕ್ಷಗಳು ನೇರವಾಗಿ ಸಿಬ್ಬಂದಿಗಳ ಖಾತೆಗೆ ಜಮೆವಾಗಿರುವುದರಿಂದ ವಾರ್ಷಿಕ ಲೆಕ್ಕಗಳಲ್ಲಿ ಜಮಾ ಖರ್ಚು ತೆಗೆದುಕೊಂಡು ಈ ಕೆಳಗಿನಂತೆ ಅನುಮೋದನೆಯನ್ನು ನೀಡಲಾಯಿತು.

| Particulars | Cash | TDR |
|---|---|---|
| Opening Balance | 60,28,27,461 | 56,68,27,679 |
| 2021-22 Receipts | 114,21,78,954 | 2,32,09,182 |
| **Total Receipts** | **174,50,06,415** | **59,00,36,861** |
| **Total Expenditure** | **130,79,40,974** | **4,19,57,341** |
| **Closing Balance** | **43,70,65,441** | **54,80,79,520** |

**ನಿರ್ಣಯ :** ಸುದೀರ್ಘ ಚರ್ಚೆಯ ನಂತರ, 2021-22ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಪತ್ರಗಳಿಗೆ ಸಭೆಯ ಅನುಮೋದನೆಯನ್ನು ನೀಡಿತು.

**2022-ಹಸ:1:05** ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು:

ಅಂತಿಮವಾಗಿ, ಸಭೆಗೆ ಆಗಮಿಸಿ ತಮ್ಮ ಅತ್ಯಮೂಲ್ಯ ಸಲಹೆ/ ಸಹಕಾರಗಳನ್ನು ನೀಡಿದ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳಿಗೆ ಹಣಕಾಸು ಅಧಿಕಾರಿಗಳು ವಂದಿಸಿದ ನಂತರ ಸಭೆಯು ಮುಕ್ತಾಯಗೊಂಡಿತು.

(ಎಸ್. ರಾಮಕೃಷ್ಣ, ಕ.ಆಡ.ಸೇ.)
ಹಣಕಾಸು ಅಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿಗಳು

ಸಹಿ/-
(ಪ್ರೊ. ಬಿ.ಪಿ. ವೀರಭದ್ರಪ್ಪ)
ಕುಲಪತಿಗಳು ಹಾಗೂ ಅಧ್ಯಕ್ಷರು